ನಡೆಯುತ್ತಿದೆಯೇ?

ಇ) ಇದಕ್ಕೆ ಬೇಕಾದ ಅಗ್ನಿಶಾಮಕ ವಾಹನ ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆಯೇ? ಹಾಗಿದ್ದಲ್ಲಿ ಈ ಸೌಲಭ್ಯಕ್ಕಾಗಿ ಅಧಿಕೃತವಾಗಿ ಕಚೇರಿಯನ್ನು ಪ್ರಾರಂಭಿಸದಿರಲು ಕಾರಣಗಳೇನು?

ಈ) 2-3 ಬಾರಿ ಪ್ರಾರಂಭೋತ್ಸವಕ್ಕೆ ಸಿದ್ದತೆ ನಡೆಸಿ ಮಧ್ಯದಲ್ಲಿ ನಿಂತು ಹೋಗಿರುವ ಸಂಗತಿ ನಿಜವೇ ಇದಕ್ಕೆ ಕಾರಣಗಳೇನು?

ಉ) ಸಾರ್ವಜನಿಕ ಹಿತದೃಷ್ಟಿಯಿಂದ ಉದ್ಘಾಟನೆಯನ್ನು ಯಾವಾಗ ಮಾಡಲಾಗುವುದು ತಿಳಿಸುವುದು?

ಉತ್ತರ

ಅ) ಹೌದು

ಆ) ಸರ್ಕಾರಿ ಆದೇಶ ಸಂಖ್ಯೆ ಒಇ 130 ಕಅಸೇ 95, ದಿನಾಂಕ 6-3-1996ರಲ್ಲಿ ಅಗ್ನಿಶಾಮಕ ರಾಣೆಯನ್ನು ತೆರೆಯಲು ಮಂಜೂರಾತಿ ನೀಡಲಾಗಿದೆ ಈ ಅಗ್ನಿಶಾಮಕ ರಾಣೆಯನ್ನು ಇನ್ನೂ ತೆರೆದಿರುವುದಿಲ್ಲ

ಇ) ಈ ರಾಣೆಗೆ ಬೇಕಾದ ಅಗ್ನಿಶಾಮಕ ವಾಹನವನ್ನು ಗುರುತಿಸಿ ಅಗ್ನಿಶಾಮಕ ಸೇವಾ ಕಾರ್ಯಗಾರದಲ್ಲಿ ಇಡಲಾಗಿದೆ ಸಿಬ್ಬಂದಿಗಳನ್ನು ರಾಣೆಯನ್ನು ಪ್ರಾರಂಭಿಸುವಾಗ್ಗೆ ನಿಯೋಜಿನಲಾಗುವುದು ಈಗ ಹಾಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ತಾತ್ಕಾಲಿಕ ಕಟ್ಟಡವನ್ನು ಒದಗಿಸಲಾಗಿದೆ ರಾಣೆಯನ್ನು ಸಧ್ಯದಲ್ಲಿಯೇ ಪ್ರಾರಂಭಿಸಲಾಗುವುದು

ಈ) ಆಡಳಿತಾತ್ಮಕ ಕಾರಣಗಳಿಂದ ಪ್ರಾರಂಭೋತ್ಸವವನ್ನು ನಿಲ್ಲಿಸಲಾಗಿದೆ

ಉ) ಸದ್ಯದಲ್ಲೇ ನಡೆಸಲಾಗುವುದು

ಪೋಲೀಸ್ ಸಿಬ್ಬಂದಿಗಳಿಗೆ ರಜೆ ಸೌಲಭ್ಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 46(78)

ಸದಸ್ಯರ ಹೆಸರು ಶ್ರೀ ಸದಾನಂದಗೌಡ ಡಿ ವಿ.(ಪುತ್ತೂರು)

ಉತ್ತರಿಸುವ ಸಚಿವರು ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ಕಾನ್ಸ್‌ಟೇಬಲ್ ದರ್ಜೆಯ ಒಟ್ಟು ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಆ) ಅವರಿಗೆ ರವಿವಾರದಂದು ವಾರದ ರಜೆಯನ್ನು ಪಡೆದುಕೊಳ್ಳುವ ಅವಕಾಶವಿದೆಯೇ?

ಇ) ಹಾಗಿದ್ದಲ್ಲಿ ಈ ರಜೆಯನ್ನು ಮಂಜೂರು ಮಾಡದೆ ನಿರಾಕರಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಈ ನಿಟ್ಟಿನಲ್ಲಿ ಕೈಗೊಳ್ಳಲಾದ ಕ್ರಮಗಳಾವುವು?

ಉತ್ತರ

ಅ) 40,525

ಆ) ಇದೆ

ಇ) ತುರ್ತು ಸಂದರ್ಭಗಳ ಹೊರತಾಗಿ ರಜೆಯನ್ನು ನಿರಾಕರಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಈ) ಉದ್ಭವಿಸುವುದಿಲ್ಲ

ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು ಬಸ್ ಡಿಪೋ ಹಾಗೂ ಗ್ರಾಮಾಂತರದಲ್ಲಿ ಬಸ್ ಸಂಚಾರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 47(12)

ಸದಸ್ಯರ ಹೆಸರು ಶ್ರೀ ಕೃಷ್ಣಮೂರ್ತಿ ಎ ಆರ್ (ಸಂತೇಮಾರನಹಳ್ಳಿ)

ಉತ್ತರಿಸುವ ಸಚಿವರು ಶ್ರೀ ಸಿ ಆರ್ ಸಗೀರ್ ಅಹಮದ್(ಸಾರಿಗೆ ಸಚಿವರು)